


## ರಣಬೀರ್- ಐಶು ಜೋಡಿ?

ಐಶ್ವರ್ಯಾ ರೈ ಬಚ್ಚನ್ ಎರಡನೇ ಇನಿಂಗ್ಸ್ ಆಗ ಶುರುಮಾಡುತ್ತಾರೆ, ಈಗ ಶುರುಮಾಡುತ್ತಾರೆ ಎಂಬ ಸುದ್ದಿ ಹರಡತೊಡಗಿ ವರ್ಷವೇ ಉರುಳಿದೆ. ಐಶ್ ಬೇಬಿಯ ಪುನರಾಗಮನಕ್ಕೆ ಕಾದಿರುವ ಅಭಿಮಾನಿಗಳಿಗೆ ಖುಷಿಯ ಸುದ್ದಿಯೊಂದು ಬಿ-ಟೌನ್‌ನಲ್ಲಿ ಕೇಳಿಬರುತ್ತಿದೆ. ಕರಣ್ ಜೋಹರ್ ನಿರ್ದೇಶನದ ಚಿತ್ರದಲ್ಲಿ ಕರಾವಳಿ ಬೆಡಗಿ ನಟಿಸುವುದು ಬಹುತೇಕ ಖಚಿತವಾಗಿದೆ.

ಅಮೀರ್ ಖಾನ್ ನಾಯಕರಾಗಿರುವ ಚಿತ್ರದಲ್ಲಿ ಐಶ್ವರ್ಯಾ ರೀ ಎಂಟ್ರಿ ನೀಡಲಿದ್ದಾರೆ. ಇದಕ್ಕೆ ಕರಣ್ ಜೋಹರ್ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎಂಬ ಗಾಳಿಮಾತು ಹರಿದಾಡುತ್ತಿತ್ತು. ಆದರೆ ಹೊಸ ವರ್ತಮಾನದ ಪ್ರಕಾರ, ಐಶ್‌ಗೆ ಜೋಡಿಯಾಗುತ್ತಿರುವುದು ಅಮೀರ್ ಅಲ್ಲ, ಚಾಕೊಲೇಟ್ ಹೀರೊ ರಣಬೀರ್ ಕಪೂರ್. ಕರಣ್ ಸಹ ದೀರ್ಘಕಾಲದಿಂದ ನಿರ್ದೇಶನದ ಟೊಪ್ಪಿ ಧರಿಸಿಲ್ಲ. ಒಂದು ರೀತಿಯಲ್ಲಿ ಅವರಿಗೂ ಇದು ರೀ ಎಂಟ್ರಿಯೇ!

ಆದರೆ ಐಶ್ ಮತ್ತು ರಣಬೀರ್ ಜೋಡಿಯಾಗುವ ಸುದ್ದಿಯನ್ನು ಮಾತ್ರ ಅವರು ಖಚಿತ ಪಡಿಸಿಲ್ಲ. ಐಶ್ವರ್ಯಾ ಕಾಲ್‌ಶೀಟ್‌ಗಾಗಿ ಕರಣ್ ಪಟ್ಟು ಹಿಡಿದಿದ್ದು ಅವರು ನಾಯಕಿಯಾಗುವುದು ನಿಶ್ಚಿತ. ಆದರೆ ಅಮೀರ್ ಅಥವಾ ರಣಬೀರ್, ಇಬ್ಬರಲ್ಲಿ ಯಾರು ಅವರ ಆಯ್ಕೆ ಎನ್ನುವುದನ್ನು ಕರಣ್ ಗುಟ್ಟಾಗಿರಿಸಿದ್ದಾರೆ. ಐಶ್ ಅಲ್ಲದೆ, ಅನುಷ್ಕಾ ಶರ್ಮಾ ಸಹ ತಾರಾಬಳಗದಲ್ಲಿ ಇರಲಿದ್ದಾರೆ ಎಂದೂ ಹೇಳಲಾಗುತ್ತಿದೆ.

ಐಶ್ವರ್ಯಾ ಈಗಾಗಲೇ ಸಂಜಯ್ ಗುಪ್ತಾ ನಿರ್ದೇಶನದ 'ಜಜ್ಬಾ' ಚಿತ್ರಕ್ಕೆ ಸಹಿ ಹಾಕಿರುವುದಾಗಿ ಹೇಳಿಕೊಂಡಿದ್ದಾರೆ. ಜತೆಗೆ ಇನ್ನೂ ಎರಡು ಚಿತ್ರಗಳನ್ನು ಅವರು ಒಪ್ಪಿಕೊಂಡಿದ್ದಾರಂತೆ. ತಮಗಿಂತ ತುಂಬಾ ಕಿರಿಯ ವಯಸ್ಸಿನ ರಣಬೀರ್ ಜತೆ ತೆರೆ ಹಂಚಿಕೊಳ್ಳಲು ಐಶ್ ಒಪ್ಪಿಕೊಳ್ಳುತ್ತಾರೆಯೇ ಎನ್ನುವುದು ಕೆಲವರ ಪ್ರಶ್ನೆ. ಇದು ಹೊಸ ಐಶ್ವರ್ಯಾ. ಹಳೆಯ ಇಮೇಜುಗಳನ್ನು ಕಳಚಿ ಹೊಸದಾಗಿ ಬಣ್ಣ ಹಚ್ಚುತ್ತಿದ್ದಾರೆ. ಹೀಗಾಗಿ ಅವರು ಹೊಸ ನಟಿ ಎಂದು ಐಶ್ ಅಭಿಮಾನಿಗಳು ಸಮಾಧಾನ ಪಟ್ಟುಕೊಳ್ಳುತ್ತಿದ್ದಾರೆ.

## ಶ್ರೀಶಾಂತ್ ಫಿಕ್ಸ್!

ಐಪಿಎಲ್ ಕ್ರಿಕೆಟ್ ಸ್ಪಾಟ್ ಫಿಕ್ಸಿಂಗ್ ಪ್ರಕರಣದಲ್ಲಿ ಸಿಕ್ಕಿಬಿದ್ದ ಕ್ರಿಕೆಟಿಗ ಶ್ರೀಶಾಂತ್ ಬಾಲಿವುಡ್ ಹೊಸ್ತಿಲು ತುಳಿದಿದ್ದಾರೆ. ಈಗಾಗಲೇ ಮಲಯಾಳಂ ಚಿತ್ರದಲ್ಲಿ ಬಣ್ಣ ಹಚ್ಚಿರುವ ಶ್ರೀಶಾಂತ್‌ಗೆ ಸಿನಿಮಾ ಲೋಕ ಹೊಸತಲ್ಲ. 'ಸೊಂಟಕ್ಕೆ ಟವೆಲ್ ಸಿಕ್ಕಿಸಿಕೊಂಡು ಬುಕ್ಕಿಗಳಿಗೆ ಸಿಗ್ನಲ್ ನೀಡಿ ಅಮಾಯಕರಂತೆ ನಟಿಸಿದ್ದವರಿಗೆ ಅಭಿನಯವೂ ಹೊಸತಲ್ಲ ಬಿಡಿ' ಎಂಬ ಕುಹಕದ ಮಾತುಗಳೂ ಕೇಳಿಬರುತ್ತಿವೆ.

ಇರಲಿ, ಶ್ರೀಶಾಂತ್‌ಗೆ ಬಾಲಿವುಡ್ ಬಾಗಿಲು ತೆರೆದಿರುವುದು 'ಕ್ಯಾಬರೆಟ್' ಸಿನಿಮಾ. ಕ್ಯಾಬರೆ ನೃತ್ಯಗಾತಿಯ ಕಥನ ಈ ಚಿತ್ರದ್ದು. ರಿಚಾ ಚಡ್ಡಾ ನೃತ್ಯಪಟುವಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಗುಲ್ಶನ್ ದೇವಯ್ಯ ಮತ್ತು ಶ್ರೀಶಾಂತ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಶ್ರೀಶಾಂತ್ ಮೂಲತಃ ಉತ್ತಮ ನೃತ್ಯ ಪಟು. ಈ ಚಿತ್ರದಲ್ಲಿ ಮಲಯಾಳಿ ನೃತ್ಯ ತರಬೇತುದಾರನ ಪಾತ್ರ ಅವರದು. ದುಬೈನಲ್ಲಿ ನೆಲೆಸಿದ ವ್ಯಕ್ತಿ ನಾಯಕಿಯ ಬದುಕಿನಲ್ಲಿ ಪ್ರವೇಶಿಸಿ ಸಿನಿಮಾಕ್ಕೆ ತಿರುವು ನೀಡುವ ಪಾತ್ರಕ್ಕೆ ಶ್ರೀಶಾಂತ್ ತಯಾರಿ ನಡೆಸಿದ್ದಾರೆ. ಪೂಜಾ ಭಟ್ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಶ್ರೀಶಾಂತ್‌ರ ಮಲಯಾಳಂ ಶೈಲಿಯ ಹಿಂದಿ ಉಚ್ಚಾರಣೆ ಪಾತ್ರಕ್ಕೆ ಸೂಕ್ತವಾಗಿ ಹೊಂದಿಕೊಳ್ಳುತ್ತದೆ ಎನ್ನುವುದು ಪೂಜಾ ಅಭಿಪ್ರಾಯ.

ಕೌಸ್ತವ್ ನಾರಾಯಣ್ ನಿಯೋಗಿ ನಿರ್ದೇಶಿಸುತ್ತಿರುವ ಚಿತ್ರದ ಚಿತ್ರೀಕರಣ ಜನವರಿಯಲ್ಲಿ ಪ್ರಾರಂಭವಾಗಲಿದೆ. ಅಂತೂ ಬಾಲಿವುಡ್‌ನಲ್ಲಿ ಶ್ರೀಶಾಂತ್ ಫಿಕ್ಸ್ ಆಗಲಿದ್ದಾರೆ. ಅಲ್ಲಿಯೂ ಸ್ಪಾಟ್ ಫಿಕ್ಸಿಂಗ್ ನಡೆಯಬಹುದೆ?

■ ಅಮಿ

